# ಚಂದ ಛಂದ

## ಲಲನೆಯ ಉಡುಪಿನ ಅಂದ

ಫ್ಯಾಷನ್ ಎಂದಾಕ್ಷಣ ನೆನಪಾಗುವುದೇ ಮಹಿಳೆಯರು. ಫ್ಯಾಷನ್ ಕ್ಷೇತ್ರಗಳಲ್ಲಿ ಹುಡುಗಿಯರ ದಿರಿಸಿನ ವಿನ್ಯಾಸಕ್ಕೆ ವಿಶೇಷ ಪ್ರಾಶಸ್ತ್ಯ. ನಾವೇನು ಕಡಿಮೆ ಇಲ್ಲ ಎಂಬಂತೆ ಪುರುಷರೂ ವಿಭಿನ್ನತೆ ಪ್ರದರ್ಶಿಸುತ್ತಿದ್ದರೂ, ಮಹಿಳೆಯರು ತಮ್ಮದು ಒಂದು ಕೈ ಮೇಲೆ ಎಂಬಂತೆ ನಾವೀನ್ಯತೆಯ ಮೂಲಕ ಫ್ಯಾಷನ್ ಲೋಕದಲ್ಲಿ ಛಾಪು ಉಳಿಸಿಕೊಂಡಿದ್ದಾರೆ

■ ವಿದ್ಯಾಶ್ರೀ ಎಸ್

ಫ್ಯಾಷನ್ ವಸಂತದ ಹಾಗೆ. ಕಾಲ, ಸಂದರ್ಭಕ್ಕೆ ತಕ್ಕಂತೆ ನವೀನ ರೂಪ ಪಡೆಯುತ್ತಲೇ ಇರುತ್ತದೆ. ಮನಸುಗಳ ನಾಡಿಮಿಡಿತದ ಜಾಡು ಹಿಡಿದು ಮಗ್ಗುಲನ್ನು ಬದಲಿಸುತ್ತಲೇ ಇರುತ್ತದೆ.

ಫ್ಯಾಷನ್ ಎಂದಾಕ್ಷಣ ಮೊದಲು ನೆನಪಾಗುವುದೇ ಮಹಿಳೆಯರು. ಫ್ಯಾಷನ್ ಕ್ಷೇತ್ರಗಳಲ್ಲಿ ಹುಡುಗಿಯರ ದಿರಿಸಿನ ವಿನ್ಯಾಸಕ್ಕೆ ವಿಶೇಷ ಪ್ರಾಶಸ್ತ್ಯ. ಹುಡುಗರ ಉಡುಪಿಗೆ ಪ್ರಾಶಸ್ತ್ಯ ಇಲ್ಲವೆಂದಲ್ಲ. ಆದರೆ, ಹುಡುಗರ ಫ್ಯಾಷನ್ ಬಗ್ಗೆ ಅರಿವು ಹೊಂದಿರುವವರು ಬಹಳ ಕಡಿಮೆ. ನಾವೇನು ಕಡಿಮೆ ಇಲ್ಲ ಎಂಬಂತೆ ಪುರುಷರೂ ಫ್ಯಾಷನ್ ಲೋಕದಲ್ಲಿ ವಿಭಿನ್ನತೆ ಪ್ರದರ್ಶಿಸುತ್ತಿದ್ದರೂ, ಮಹಿಳೆಯರು ತಮ್ಮದು ಒಂದು ಕೈ ಮೇಲೆ ಎಂಬಂತೆ ನಾವೀನ್ಯತೆಯ ಮೂಲಕ ಛಾಪು ಉಳಿಸಿಕೊಂಡಿದ್ದಾರೆ.

ಹೊಸತನವೆನ್ನುವುದು ಆಧುನಿಕ ಉಡುಪುಗಳಿಗೆ ಮಾತ್ರವೇ ಜೋತು ಬಿದ್ದಿಲ್ಲ. ಸಾಂಪ್ರದಾಯಿಕ ಶೈಲಿಯ ಉಡುಗೆಗಳಲ್ಲಿಯೂ ಆಶ್ಚರ್ಯವೆನಿಸುವಂತಹ ವಿನ್ಯಾಸಗಳು ಮಾರುಕಟ್ಟೆ ಪ್ರವೇಶಿಸುತ್ತಲೇ ಇರುತ್ತವೆ. ಫ್ಯಾಷನ್ ಎನ್ನುವುದು ಒಂದು ವಯಸ್ಸಿಗೆ ಸೀಮಿತ ಎಂಬ ಗೊಡ್ಡು ಸಂಪ್ರದಾಯವನ್ನು ಮೀರಿ ಬೆಳೆದಿದೆ. ವಯಸ್ಸು, ದೇಹಾಕಾರಕ್ಕೆ ತಕ್ಕಂತೆ ವಸ್ತ್ರವಿನ್ಯಾಸಕರು ಪ್ರಯೋಗಗಳನ್ನು ನಡೆಸುತ್ತಿದ್ದು, ಅದು ಜನಮೆಚ್ಚುಗೆಯನ್ನು ಗಳಿಸುತ್ತಿದೆ. ಬಹುತೇಕ ಮಹಿಳೆಯರು ವಿಭಿನ್ನ ಶೈಲಿಯ ಉಡುಪುಗಳ ಪ್ರಯೋಗಕ್ಕೆ ಮುಂದಾಗುತ್ತಿರುವುದು ಈ ಕ್ಷೇತ್ರ ಇಷ್ಟೊಂದು ಮುಂಚೂಣಿ ಪಡೆಯಲು ಸಾಧ್ಯವಾಗಿದೆ.

ಶೂ, ಚಪ್ಪಲಿ, ಆಭರಣ, ಕೇಶ ವಿನ್ಯಾಸದ ಪರಿಕರಗಳು ಟ್ರೆಂಡ್‌ಗೆ ತಕ್ಕಂತೆ ಬದಲಾಗುತ್ತಲೇ ಇರುತ್ತವೆ. ಉಡುಪಿಗೆ ತಕ್ಕಂತೆ ಇವುಗಳನ್ನು ಹೊಂದಿಸಿಕೊಳ್ಳುವುದು ಜಾಣ್ಮೆ.

### ಹಳೆಯ ವಸ್ತ್ರಕ್ಕೆ ಹೊಸ ರೂಪ

ಉಡುಪಿನ ಹಳೆಯ ವಿನ್ಯಾಸಕ್ಕೆ ನಾವೀನ್ಯತೆಯ ರೂಪ ನೀಡಿ ಮಾರುಕಟ್ಟೆಗೆ ಪರಿಚಯಿಸುವ ಟ್ರೆಂಡ್ ಕಳೆದ ಕೆಲ ವರ್ಷಗಳಿಂದ ನಡೆಯುತ್ತಿದೆ. ಹಲವು ವರ್ಷಗಳಿಂದ ಕಾಪಿಟ್ಟುಕೊಂಡ ಅಮ್ಮನ ಮದುವೆಯ ಸೀರೆಯನ್ನು ಮಗಳು ತನ್ನ ಮದುವೆಗೆ ಹೊಸ ರೂಪ ನೀಡಿ ತೊಡುವುದು ಈಗ ಟ್ರೆಂಡ್ ಆಗಿದೆ. ಸೀರೆ

